ಶ್ರೀ ಬಿ. ರಾಚಯ್ಯ.— ಸಂವಿಧಾನದ ಪ್ರಕಾರ ಆಗಿದೆ.

ಶ್ರೀ ಕೆ. ಹೆಚ್. ರಂಗನಾಥ್.— ಸ್ಟೈಪೆಂಡರಿ ಪದವೀಧರರಿಗೆ ೫೦ ಪರ್ಸೆಂಟ್ ಮಾಸಲಾತಿ ಎಂದು ಹೇಳಿದ್ದೀರಿ. ಈ ಸ್ಟೈಪೆಂಡರಿ ಪದವೀಧರರನ್ನು ನೇಮಿಸಿಕೊಳ್ಳುವಾಗ ರೋಸ್ಟರ್ ಪದ್ಧತಿಯನ್ನು ಅನುಸರಣೆ ಮಾಡುತ್ತೀರಾ? ೫೦ ಪರ್ಸೆಂಟ್ ಮಾಸಲಾತಿ ಇಡುವಾಗ ಸ್ಟೈಪೆಂಡರಿ ಗ್ರಾಜುಯೇಟ್ಸ್‌ಗೆ ರೋಸ್ಟರ್ ಸಿಸ್ಟಂ ಅನುಸರಿಸುತ್ತೀರಾ? ಯಾವ ಆಧಾರದ ಮೇಲೆ ಈ ಕ್ರಮವನ್ನು ಅನುಸರಿಸುತ್ತೀರಿ ?

ಶ್ರೀ ಬಿ. ರಾಚಯ್ಯ.— ಮಾಸಲಾತಿ ಏನು ಕೊಡಬೇಕಾಗಿದೆ ಅದನ್ನು ಆಗ ಅನುಸರಿಸುತ್ತೇವೆ.

ಶ್ರೀ ಕೆ.ಹೆಚ್. ರಂಗನಾಥ್.— ರೋಸ್ಟರ್ ಪದ್ಧತಿಯನ್ನು ಅನುಸರಿಸುವಾಗ ಬಿ.ಸಿ, ಬಿ.ಸಿ.ಎಂ ಇವೆಲ್ಲಾ ಬರುತ್ತವೆ, ೫೦ ಪರ್ಸೆಂಟ್ ಸ್ಟೈಪೆಂಡರಿಗಳಿಗೆ ಏನು ಇಟ್ಟಿದ್ದೀರಿ, ಅವರಿಗೆ ಈ ಕ್ರಮವನ್ನು ಅನುಸರಿಸುತ್ತೀರಾ?

ಶ್ರೀ ಬಿ. ರಾಚಯ್ಯ.— ಅವರು ಹೇಳಿದ ರೀತಿ ಬರುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.— (ಉ) ಪ್ರಶ್ನೆಗೆ ಉತ್ತರ ಕೊಡುವಾಗ ಒಂದು ವರ್ಷ ಸೇವೆ ಸಲ್ಲಿಸಿರುವ ಸ್ಟೈಪೆಂಡರಿ ಪದವಿ ಧರರಿಗೆ ಹಾಗೂ ಅಭ್ಯರ್ಥಿನಿ ಪತ್ರ ಸಲ್ಲಿಸುವ ದಿನಾಂಕದಂದು ಆರು ತಿಂಗಳ ಸೇವೆ ಸಲ್ಲಿಸಿರುವ ಸ್ಥಳೀಯ ಅಭ್ಯರ್ಥಿಗಳಿಗೆ ಪ್ರಕಟಿಸಿರುವ ಹುದ್ದೆಗಳಲ್ಲಿ ಕೇ. ೫೦ರಷ್ಟು ಹುದ್ದೆಗಳನ್ನು ಮಾಸಲಿಡುವ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದ್ದೀರಿ. ಇದರಿಂದ ೯೭೧ರಲ್ಲಿ ೪೮೧ ಜನಗಳಿಗೆ ಮಾತ್ರ ಕೆಲಸ ಸಿಗುತ್ತದೆ, ಇನ್ನು ೪೮೦ ಜನರನ್ನು ಏನು ಮಾಡುತ್ತೀರಿ, ಅವರು ಬೀದಿ ಪಾಲಾಗುವುದಿಲ್ಲವೇ, ಅವರಿಗೆ ಏನು ವ್ಯವಸ್ಥೆ ಮಾಡಿದ್ದೀರಿ?

ಶ್ರೀ ಬಿ. ರಾಚಯ್ಯ.— ಈ ವರ್ಷ ಪ್ರೌಢಶಾಲೆಗಳಲ್ಲಿ ಕೊಟ್ಟಿರತಕ್ಕ ಹೊಸ ಉಪಾಧ್ಯಾಯರ ಹುದ್ದೆಗಳನ್ನು ಲೆಕ್ಕ ಹಾಕಿದಾಗ ಬಹುಶಃ ಅವರಿಗೂ ದೊರೆಯಬಹುದು ಎನ್ನುವುದು ಸರ್ಕಾರದ ಅಭಿಪ್ರಾಯವಿದೆ.

ಗೊತ್ತುಪಡಿಸಿರುವ ಪಠ್ಯಪುಸ್ತಕಗಳನ್ನು ಬಿಡುಗಡೆ ಮಾಡುವಲ್ಲಿ ವಿಳಂಬ

೩೮೭ (೧೦೦) ಶ್ರೀ ಎಂ. ಪುಟ್ಟಸ್ವಾಮಿಗೌಡ (ಕೃಷ್ಣರಾಜಪೇಟೆ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ:—

ಅ) ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಗೊತ್ತುಪಡಿಸಿರುವ ಎಲ್ಲಾ ಪಠ್ಯಪುಸ್ತಕಗಳು ಮುದ್ರಿತವಾಗಿ ಬಿಡುಗಡೆಯಾಗಿವೆಯೆ ?

ಆ) ಹಾಗಿದ್ದಲ್ಲಿ ಕಾರಣಗಳೇನು ?

ಇ) ಮುದ್ರಣವಾಗದಿರುವ ಪಠ್ಯಪುಸ್ತಕಗಳನ್ನು ಎಷ್ಟು ತಿಂಗಳಲ್ಲಿ ಮುದ್ರಿಸಿ ಬಿಡುಗಡೆ ಮಾಡಲಾಗುತ್ತಿದೆ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).—

ಅ) ಹೌದು ಬಿಡುಗಡೆಯಾಗಿದೆ. ಆದರೆ ಕೆಲವು ಪುಸ್ತಕಗಳನ್ನು ಸಕಾಲದಲ್ಲಿ ಬಿಡುಗಡೆ ಮಾಡದಿರುವುದಕ್ಕೆ ಕಾರಣಗಳು ಈ ಕೆಳಗಿನಂತಿವೆ.

ಆ) ಮುದ್ರಣಕ್ಕೆ ಬೇಕಾದ ಕಾಗದ ರಿಯಾಯಿತಿ ದರದಲ್ಲಿ ಸುಮಾರು ೯ ತಿಂಗಳುಗಳ ಕಾಲ ಸರಬರಾಜು ಆಗದೆ ಇದ್ದದ್ದು.

ಇ) ಡಿಸೆಂಬರ್ ೧೯೭೨ರಿಂದ ಸುಮಾರು ಆರು ತಿಂಗಳ ಕಾಲ ವಿದ್ಯುಚ್ಛಕ್ತಿ ಕೊರತೆ ಇದ್ದದ್ದು.

ಶ್ರೀ ಎಂ. ಪುಟ್ಟಸ್ವಾಮಿಗೌಡ.—ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಗೊತ್ತುಪಡಿಸಿರುವ ಪಠ್ಯಪುಸ್ತಕಗಳು ಬಿಡುಗಡೆಯಾಗಿದೆ ಎಂದು ಹೇಳಿದಿರಿ, ಯಾವಾಗ ಬಿಡುಗಡೆಯಾಯಿತು ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸುತ್ತೀರಾ ? ಎರಡನೆಯದು, ಬಿಡುಗಡೆಯಾಗಿದ್ದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಪುಸ್ತಕಗಳ ಅಭಾವ ಇರುವುದಕ್ಕೆ ಕಾರಣಗಳೇನು ? ಗ್ರಾಮಾಂತರ

ಪ್ರದೇಶದ ಮಕ್ಕಳಿಗೆ ಇಷ್ಟು ವಿಳಂಬ ಮಾಡುವುದಕ್ಕೆ ಅಧಿಕಾರಿಗಳ ತಾತ್ಸಾರ ಮನೋಭಾವನೆ ಕಾರಣ ಎನ್ನತಕ್ಕ ಪ್ರಶ್ನೆಯನ್ನು ನಾನು ಹಾಕುತ್ತೇನೆ. ವಿಳಂಬವಾಗುವುದಕ್ಕೆ ಕಾರಣ ಏನೇ ಇರಲಿ, ಇನ್ನು ಮುಂದಾದರೂ ಶಾಲೆಗಳು ಪ್ರಾರಂಭವಾಗುವಷ್ಟರಲ್ಲಿ ಪುಸ್ತಕಗಳನ್ನು ಪ್ರಕಟ ಮಾಡತಕ್ಕ ದೃಢ ನಿರ್ಧಾರವನ್ನು ಸರ್ಕಾರ ಕೈಗೊಳ್ಳುತ್ತದೆಯೇ ಎಂದು ಶಾಲಾ ಮಕ್ಕಳ ಪರವಾಗಿ ಕೇಳಿ ಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಸ್ವಾಮಿ, ಹಳ್ಳಿಯ ಮಕ್ಕಳಿಗೆ ಬೇರೆ, ಪಟ್ಟಣದ ಮಕ್ಕಳಿಗೆ ಬೇರೆ ಎಂದು ನಾವು ಮಾಡಿರಲಿಲ್ಲ. ಈ ವರ್ಷ ಸುಮಾರು ೨೦೦ ಲಕ್ಷ ಪುಸ್ತಕಗಳನ್ನು ಅಚ್ಚು ಹಾಕಿಸಬೇಕಾಗಿ ಬಂತು. ಅದರಲ್ಲಿ ೧೧೭ ಲಕ್ಷ ಪುಸ್ತಕಗಳನ್ನು ಅಚ್ಚು ಹಾಕಿ ಹಂಚಲಾಗಿದೆ. ಅದರಲ್ಲಿ ಇದುವರೆಗೆ ಒದಗಿಸಿರತಕ್ಕಂಥಾದ್ದು ಸುಮಾರು ೧೯ ಲಕ್ಷ ಪುಸ್ತಕಗಳು. ಇನ್ನು ೧೧೬.೮೮ ಲಕ್ಷ ಪುಸ್ತಕಗಳು ಅಚ್ಚು ಆಗಬೆ ಕಾಗಿದೆ. ಇದರಲ್ಲಿ ೯೨% ತರಗತಿಯಲ್ಲಿ ತೆಲುಗು ಪುಸ್ತಕಗಳು ಬಿಟ್ಟರೆ ಎಲ್ಲಾ ಪುಸ್ತಕಗಳು ಬಿಡುಗಡೆಯಾಗಿವೆ. ಇನ್ನು ಒದಗಿಸಬೇಕಾದ ಪುಸ್ತಕಗಳಲ್ಲಿ ೮೦ ಸಾವಿರ ಮಾತ್ರ ಪ್ರಿಂಟ್ ಮಾಡ ಬೆ ಕಾಗಿದೆ. ಒಟ್ಟಿನಲ್ಲಿ ಸುಮಾರು ೩೩ ಲಕ್ಷ ಪುಸ್ತಕಗಳಲ್ಲಿ ಕೇವಲ ೧೭ ಪರ್ಸೆಂಟ್ ಮಾತ್ರ ಬಿಡುಗಡೆಯಾಗದೆ, ಅಚ್ಚಾಗದೆ ಉಳಿದಿದೆ. ಈ ವರ್ಷ ಸುಮಾರು ೧೦ ಲಕ್ಷ ಪುಸ್ತಕಗಳನ್ನು ೧೫೦ ಕೋಟಿ ರೂಪಾಯಿಗಳಲ್ಲಿ ಖಾಸಗಿಯವರಿಗೆ ಕೊಟ್ಟು ಪ್ರಿಂಟ್ ಮಾಡಿಸಿದ್ದೇವೆ. ಒಟ್ಟಿನಲ್ಲಿ ಸುಮಾರು ೧೨ ಲಕ್ಷ ಪುಸ್ತಕಗಳು ಎರಡು ಕೋಟಿ ರೂಪಾಯಿಗಳ ಖರ್ಚಿನಲ್ಲಿ ಅಚ್ಚು ಆಗಬೇಕಾಗಿದೆ. ಅದಕ್ಕೆ ಸ್ಕೂಲ್ ಸರ್ವಿಸ್ ಕಾರ್ಪೊರೇಷನ್ ಈ ವರ್ಷ ಅದಕ್ಕೇ ಒಂದು ಪ್ರತ್ಯೇಕವಾಗಿರತಕ್ಕ ನಿರ್ದೇಶಕರನ್ನು ಮಾಡಿ ಅವರಿಗೆ ಹೆಚ್ಚು ಜವಾಬ್ದಾರಿ ಕೊಟ್ಟು ಪಠ್ಯಪುಸ್ತಕಗಳನ್ನು ಮುಂದಿನ ವರ್ಷ ಸಕಾಲದಲ್ಲಿ ಅಚ್ಚಾಗಿ ಎಲ್ಲಾ ಮಕ್ಕಳಿಗೂ ತಲುಪತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ಪುಟ್ಟಸ್ವಾಮಿಗೌಡ.—ಸೆಪ್ಟೆಂಬರ್ ತಿಂಗಳ ಮಧ್ಯ ಭಾಗ ಬಂದರೂ ಕೂಡ ಪುಸ್ತಕ ಗಳು ಪ್ರಕಟಣೆಯಾಗಿಲ್ಲ ಎನ್ನತಕ್ಕ ಮಾತನ್ನು ಅವರು ಒಪ್ಪಿಕೊಂಡಿದ್ದಾರೆ ಮತ್ತು ಸಭೆಯೂ ಗಮನಿಸಿದೆ. ಈ ರೀತಿ ಪುಸ್ತಕಗಳ ಕೊರತೆ ಇರುವಾಗ ಮಕ್ಕಳ ಭವಿಷ್ಯ ಏನು, ಪರೀಕ್ಷೆ ದೃಷ್ಟಿಯಿಂದ ಮಕ್ಕಳ ಭವಿಷ್ಯ ಏನು ಎನ್ನತಕ್ಕಂಥಾದ್ದನ್ನು ಹೇಳಬೇಕು.

ಉಪಾಧ್ಯಕ್ಷರು.—ಒದಗಿಸುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಂ. ಪುಟ್ಟಸ್ವಾಮಿಗೌಡ.—'ಸಂಬಂಧಗಳು' ಎಂಬ ಪುಸ್ತಕದ ಬಗ್ಗೆ ಈ ಸಭೆಯಲ್ಲಿ ಆಕ್ಷೇಪಣೆ ಎತ್ತಿದರು, ಆಗ ಅದನ್ನು ತೆಗೆದುಹಾಕರತಕ್ಕ ಸರ್ಕಾರ ಸೆಪ್ಟೆಂಬರ್ ತಿಂಗಳವರೆಗೂ ಪುಸ್ತಕಗಳನ್ನು ಒದಗಿಸಿಲ್ಲ ಎಂದರೆ ಪರೀಕ್ಷೆ ದೃಷ್ಟಿಯಿಂದ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಮಾನ್ಯ ವಿದ್ಯಾ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಹಿಂದಿನ ಅಧಿವೇಶನದಲ್ಲಿ 'ಸಂಬಂಧಗಳು' ಎಂಬ ಪುಸ್ತಕದ ಬಗ್ಗೆ ಆಕ್ಷೇಪಣೆ ಎತ್ತಿದ್ದರಿಂದ ಅದನ್ನು ತೆಗೆದರು. ಈಗ ಹೊಸ ಪುಸ್ತಕಗಳು ಬರಬೇಕಾದರೆ ತಡವಾಗಿದೆ. ಆ ದೃಷ್ಟಿಯಿಂದ ಈ ವರ್ಷ ಅದಂಥ ತೊಂದರೆ ಏನಿದೆ ಅದು ಮುಂದಿನ ವರ್ಷ ಬರದೇ ಇರುವಂತೆ ನೋಡಿಕೊಳ್ಳುತ್ತೇನೆ ಎಂದು ಹೇಳಿದ್ದೇನೆ.

ಕಳ್ಳಂಬೆಳ್ಳ ಹೋಬಳಿ ಚಿಕ್ಕಹಳ್ಳಿಯಲ್ಲಿರುವ ಕಟ್ಟಡವನ್ನು ಶಿಕ್ಷಕರ ಗೃಹವನ್ನಾಗಿ ಪರಿವರ್ತಿಸುವುದು

೨೮೮ (೬) ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೇ:—

(ಅ) ಶಿಕ್ಷಣ ಇಲಾಖೆಯು ಅಧೀನದಲ್ಲಿರುವ ಸಿರಾ ತಾಲ್ಲೂಕಿನ ಕಳ್ಳಂಬೆಳ್ಳ ಹೋಬಳಿ ಚಿಕ್ಕಹಳ್ಳಿಯಲ್ಲಿರುವ ದನದ ಕೊಟ್ಟಿಗೆಯನ್ನು ಶಿಕ್ಷಕರ ವಸತಿ ಗೃಹಗಳಾಗಿ ಮಾರ್ಪಾಡು ಮಾಡುವ ಬಗ್ಗೆ ಪರಿಶೀಲಿಸುವುದೇ ;

(ಆ) ಹಾಗಿದ್ದಲ್ಲಿ ಈ ಕಟ್ಟಡ ಯಾವಾಗ ವಸತಿ ಗೃಹಗಳಾಗಿ ಮಾರ್ಪಾಡಾಗುವುದು ?